ಹಿಂದುಳಿದಿದೆ. ಆದರೆ, ಇಂತಹ ಒಂದು ವಿಷಯದಲ್ಲಿ ಹಿಂದುಳಿಯಬಾರದು; ಏಕೆಂದರೆ ಧಾರವಾಡ ಹಾಗೂ ಅನೇಕ ಕೇಂದ್ರಗಳಲ್ಲಿ ಸಾಹಿತಿಗಳು, ಜ್ಞಾನಪೀಠಪ್ರಶಸ್ತಿ ಪಡೆದಂಥ ಅತ್ಯುತ್ತಮ ಜನ ಇರುವಾಗ ದಯವಿಟ್ಟು ತಾವು ಇದನ್ನು ಗಂಭೀರವಾಗಿ ಪರಿಶೀಲನೆ ಮಾಡಿ; ಏಕೆಂದರೆ ತಾವು ರಾಜ್ಯಪಾಲರ ಮೇಲೆ ಹೇಳಿದಿರಿ, ರಾಜ್ಯಪಾಲರು ಯಾವ ರೀತಿಯಾಗಿ ಕಾರ್ಯವೈಖರಿ ಮಾಡುತ್ತಾರೆ ಎಂಬುದು ನಮಗೆ ಗೊತ್ತಿದೆ. ಆದುದರಿಂದ ದಯವಿಟ್ಟು ಇನ್ನು ಮುಂದೆ ಗಂಭೀರವಾಗಿ ಪರಿಶೀಲನೆ ಮಾಡಿ ಇದನ್ನು ಬಗೆಹರಿಸುವ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ತಾವು ರಾಜ್ಯಪಾಲರ ಮೇಲೆ ಆಕ್ಷೇಪಣೆ ಮಾಡುವುದು ಬೇಡ. ಅವರು ಏನು ಹೇಳಿದರು ಎಂದರೆ ಅಲ್ಲಿ ಯಾವ ರೀತಿ ನಡೆಯುತ್ತದೆ ಎಂಬುದು ನಮಗೆ ಗೊತ್ತಿದೆ ಎಂದರು, ಆ ಶಬ್ದ ನಮ್ಮ ಮನಸ್ಸಿನಲ್ಲಿ ಬೇಡ. ನಾನು ಈಗಾಗಲೇ ಹೇಳಿದ್ದೇನೆ. ನಾನು ಅವರ ಹತ್ತಿರ ಮಾತನಾಡುತ್ತೇನೆ. ಮಾತನಾಡಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಉಪಾಧ್ಯಕ್ಷರೆ, ಧಾರವಾಡವು ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತಿಷ್ಠಿತವಾದಂಥ ಒಂದು ವಿದ್ಯಾ ಕೇಂದ್ರ. ಅದು ವಿಶ್ವವಿದ್ಯಾಲಯದಂಥ ವಿದ್ಯಾ ದೇಗುಲಗಳಲ್ಲಿ ಈ ಉಪಕುಲಪತಿಗಳ ನೇಮಕಾತಿಯಲ್ಲಿ ಇಂತಹ ಒಂದು ಪ್ರಶ್ನಾತೀತ ನೇಮಕಾತಿ ಆಗುತ್ತಿದೆ ಎಂದರೆ ಆ ಭಾಗದ ಜನರ ಮನಸ್ಸಿಗೆ ಬಹಳ ನೋವಾಗುತ್ತದೆ. ಜೊತೆಗೆ ಅಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಂದ ಕೂಡ ಇದರ ಬಗ್ಗೆ ಬಹಳಷ್ಟು ಟೀಕೆ ಟಿಪ್ಪಣಿಗಳು ಬಂದಿವೆ. ಆ ಕಾರಣ ಅಲ್ಲಿಯವರನ್ನೇ ಉಪಕುಲಪತಿಗಳನ್ನಾಗಿ ಮಾಡುವುದರಿಂದ ಆ ಭಾಗದಲ್ಲಿ ಇರತಕ್ಕಂಥ ಆಡಳಿತ ವ್ಯವಸ್ಥೆಯ ಬಗ್ಗೆಯೂ ಕೂಡ ಅವರು ಸಂಪೂರ್ಣವಾಗಿ ತಿಳಿದುಕೊಂಡವರಿರುತ್ತಾರೆ. ಜೊತೆಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಅಲ್ಲಿಯ ವಿದ್ಯಾಪರ ಅಭಿವೃದ್ಧಿಗೆ ಪ್ರಯತ್ನ ಮಾಡತಕ್ಕಂಥ ಕ್ರಿಯಾಶಕ್ತಿಯನ್ನು ಅವರು ಹೊಂದಿರುವರಾಗಿರುತ್ತಾರೆ. ಆ ಕಾರಣ ತಾವು ಈ ಒಂದು ವಿಷಯದಲ್ಲಿ ಹೆಚ್ಚಿನ ಜಾಗ್ರತಯನ್ನು ಇನ್ನು ಮುಂದೆಯಾದರೂ ವಹಿಸಿ ಇದನ್ನು ಸರಿಪಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ : ಅವರು ಏನು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ವರದಿ ಮಂಡನೆ

ಉಪಾಧ್ಯಕ್ಷರು : ವಿಧಾನಸಭೆಯ ನಿಯಮಗಳ ಸಮಿತಿಯ ವರದಿ 1994-95ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಿರುವ ವಿಷಯ ಸಮಿತಿಗಳು ಎರಡು ವರ್ಷಗಳ ಕಾಲ ನಡೆಸಿದ ಕಾರ್ಯನಿರ್ವಹಣೆಯ ಅನುಭವದಲ್ಲಿ ಕೆಲವೊಂದು ನ್ಯೂನ್ಯತೆಗಳು ಕಂಡುಬಂದ ಕಾರಣ ದಿನಾಂಕ 4-3-96ರಂದು ವಿಧಾನಸಭೆಯ ಕಾರ್ಯಕಲಾಪ ಸಮಿತಿಯ ಸಭೆಯಲ್ಲಿ

ವಿಷಯ ಸಮಿತಿಗಳ ನಿಯಮಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಲು ನಿಯಮಾವಳಿ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಆ ಕಾರಣ ವಿಧಾನಸಭಾ ನಿಯಮಾವಳಿ ಸಮಿತಿಯು ದಿನಾಂಕ 5-3-96ರಂದು ಸಭೆ ಸೇರಿ ವಿಷಯ ಸಮಿತಿಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ತಿದ್ದುಪಡಿಗಳನ್ನು ತರಲು ಶಿಫಾರಸ್ಸು ಮಾಡಿತು. ಈ ತಿದ್ದುಪಡಿಯಿಂದ ವಿಷಯ ಸಮಿತಿಗಳು ತಮ್ಮ ಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಅನುಕೂಲವಾಗುತ್ತದೆಂದು ಭಾವಿಸುತ್ತೇನೆ. ಹಾಗೂ ಆ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ವರದಿಯನ್ನು ಮಂಡಿಸಲಾಯಿತು)

ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ದಿನಾಂಕ 6ನೇ ಮಾರ್ಚ್ 1996ರಂದೂ ಕರ್ನಾಟಕ ವಿಧಾನ ಪರಿಷತ್ತು "ಬೆಂಗಳೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕ, 1996"ನ್ನು ಯಾವುದೇ ತಿದ್ದುಪಡಿಯಿಲ್ಲದೇ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಚಂದ್ರಶೇಖರರೆಡ್ಡಿ ದೇಶಮುಖಿಮದನ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) : ಮಾನ್ಯ ಉಪಾಧ್ಯಕ್ಷರೇ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ 67ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

SRI J.A. FERNANDES : Sir, I present the Fourteenth Report of the Committee on Papers Laid on the Table.

MR. DEPUTY SPEAKER : Report is presented.

ಶಾಸನ ರಚನಾ ಕಾರ್ಯಕಲಾಪ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

"ಕರ್ನಾಟಕ ವಿಧಾನಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿ."